# ಆಲ್ಬಂ ಸಾಂಗ್‌ನಲ್ಲಿ ಖುಷಿ, ಪೃಥ್ವಿ

ಪೃಥ್ವಿ ಅಂಬರ್ ಮತ್ತು ಖುಷಿ ರವಿ ಒಟ್ಟಿಗೆ ನಟಿಸಿದ್ದ 'ದಿಯಾ' ಸಿನಿಮಾ ಒಟಿಟಿ ಮೂಲಕವೇ ಸಾಕಷ್ಟು ಜನರನ್ನು ತಲುಪಿದ್ದು ಹಳೆಯ ಸುದ್ದಿ. ಅಷ್ಟೇ ಅಲ್ಲ, ಆ ಸಿನಿಮಾ ಪೃಥ್ವಿ ಮತ್ತು ಖುಷಿ ಇಬ್ಬರಿಗೂ ಸಾಕಷ್ಟು ಅವಕಾಶಗಳನ್ನು ಕೊಟ್ಟಿದೆ. ಪೃಥ್ವಿ ಕನ್ನಡದಲ್ಲಿಯೇ ಹಲವು ಸಿನಿಮಾಗಳಲ್ಲಿ ನಾಯಕನಾಗಿ ನಟಿಸುತ್ತಿದ್ದರೆ, ಖುಷಿ ಕನ್ನಡದ ಜೊತೆಗೆ ತೆಲುಗು ಚಿತ್ರರಂಗಕ್ಕೂ ಅಡಿಯಿಟ್ಟಿದ್ದಾರೆ. ಈ ನಡುವೆ ಅದೇ ಜೋಡಿ ಇನ್ನೊಂದು ಸಿನಿಮಾದಲ್ಲಿಯೂ ಒಟ್ಟಿಗೆ ನಟಿಸುತ್ತಿರುವ ಸುದ್ದಿ ಹೊರಬಿದ್ದಿತ್ತು. ಆ ಸಿನಿಮಾ ಯಾವ ಹಂತದಲ್ಲಿದೆಯೋ ಗೊತ್ತಿಲ್ಲ, ಆದರೆ ಅದಕ್ಕೂ ಮೊದಲು ಪೃಥ್ವಿ ಮತ್ತು ಖುಷಿ ಇಬ್ಬರನ್ನೂ ಒಟ್ಟಿಗೆ ನೋಡುವ ಅವಕಾಶವಂತೂ ಸಿಗಲಿದೆ. ಇವರಿಬ್ಬರೂ ಒಂದು ಆಲ್ಬಂ ಸಾಂಗ್‌ನಲ್ಲಿ ಒಟ್ಟಿಗೆ ಹೆಜ್ಜೆ ಹಾಕುತ್ತಿದ್ದಾರೆ. ಆಲ್ಬಂ ಸಾಂಗ್‌ನ ಪರಿಕಲ್ಪನೆ, ನೃತ್ಯಸಂಯೋಜನೆ ಎಲ್ಲವೂ ವಿಭಿನ್ನವಾಗಿದೆಯಂತೆ. ಹಾಗಾಗಿ ಹಿಂದೊಮ್ಮೆ ತೆರೆಯ ಮೇಲೆ ಸಿಕ್ಕಿದ್ದ ಯಶಸ್ಸು ಇದರಲ್ಲಿಯೂ ತಮಗೆ ಸಿಗಲಿದೆ ಎಂಬ ಭರವಸೆಯಲ್ಲಿ ಇಬ್ಬರೂ ಇದ್ದಾರೆ.

ದಿನೇಶ್ ಎನ್ನುವವರು ಈ ಆಲ್ಬಂ ಸಾಂಗ್ ಅನ್ನು ನಿರ್ಮಾಣ ಮಾಡುತ್ತಿದ್ದಾರೆ. ರವೀಂದ್ರ ಅವರು ನಿರ್ದೇಶನ ಮಾಡಿದ್ದಾರೆ. ■







# ಶಿವಣ್ಣನ ನ್ಯೂ ಲುಕ್!

ಇತ್ತೀಚೆಗೆ ನಟ ಶಿವರಾಜ್‌ಕುಮಾರ್ ಅವರ ಸ್ಟೈಲಿಶ್ ಲುಕ್ ಒಂದು ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಆಗಿತ್ತು. ಕಪ್ಪು ಬಣ್ಣದ ವಿಶಿಷ್ಟ ವಿನ್ಯಾಸದ ದಿರಿಸಿನಲ್ಲಿ ಮಿರಿಮಿರಿ ಮಿಂಚುತ್ತಿದ್ದ ಅವರು ಹತ್ತು ವರ್ಷ ಚಿಕ್ಕವರಂತೆ ಕಾಣಿಸುತ್ತಿದ್ದರು. ಅದು 'ಬೈರಾಗಿ' ಚಿತ್ರದ ಹಾಡೊಂದರ ಚಿತ್ರೀಕರಣಕ್ಕೆ ಶಿವಣ್ಣನ ಲುಕ್.

ವಿಜಯ್ ಮಿಲ್ಟನ್ ನಿರ್ದೇಶನದ 'ಬೈರಾಗಿ' ಸಿನಿಮಾದಲ್ಲಿ 'ರಿದಂ ಆಫ್ ಶಿವಪ್ಪ' ಎಂಬ ಹಾಡನ್ನು ಒಂದೇ ಟೇಕ್‌ನಲ್ಲಿ ಚಿತ್ರೀಕರಿಸಲಾಗಿದೆಯಂತೆ. ಇದು ಶಿವಣ್ಣನ ಇಂಟ್ರಡಕ್ಷನ್ ಸಾಂಗ್.

'ಟಗರು' ಸಿನಿಮಾದ ನಂತರ ಡಾಲಿ ಧನಂಜಯ್ ಮತ್ತು ಶಿವಣ್ಣ ಈ ಚಿತ್ರದಲ್ಲಿ ಮತ್ತೆ ಒಟ್ಟಿಗೆ ನಟಿಸುತ್ತಿದ್ದಾರೆ. ಜೊತೆಗೆ ಪೃಥ್ವಿ ಅಂಬರ್, ಯಶಾ ಶಿವಕುಮಾರ್ ಕೂಡ ಈ ಹಾಡಿನಲ್ಲಿ ಹೆಜ್ಜೆ ಹಾಕಿದ್ದಾರೆ. ಚಿಕ್ಕಣ್ಣ ಒಂದು ವಿಶೇಷ ಪಾತ್ರದಲ್ಲಿ ನಟಿಸುತ್ತಿದ್ದಾರಂತೆ.

ಈಗಾಗಲೇ ಬೈರಾಗಿ ಚಿತ್ರದ ಚಿತ್ರೀಕರಣ ಬಹುತೇಕ ಮುಗಿದಿದೆ. ಇನ್ನೇನು ಪೋಸ್ಟ್ ಪ್ರೊಡಕ್ಷನ್ ಹಂತದ ಕೆಲಸಗಳು ಪ್ರಾರಂಭವಾಗಲಿವೆ.

ವಿಜಯ್ ಮಿಲ್ಟನ್ ನಿರ್ದೇಶನದ ಜೊತೆಗೆ ಛಾಯಾಗ್ರಹಣವನ್ನೂ ಮಾಡುತ್ತಿರುವ ಈ ಸಿನಿಮಾಗೆ ಅನೂಪ್ ಸೀಳಿನ್ ಸಂಗೀತ ಸಂಯೋಜನೆ ಮಾಡಿದ್ದಾರೆ. ■

# ಹೊಸ ಸಾಹಸದಲ್ಲಿ ಸತ್ಯ!

ನಿರ್ದೇಶಕ ಡಿ. ಸತ್ಯಪ್ರಕಾಶ್ ಹೊಸ ಸಾಹಸಕ್ಕಿಳಿದಿದ್ದಾರೆ. ಮೊದಲ ಸಿನಿಮಾ 'ರಾಮಾ ರಾಮಾ ರೇ'ದಲ್ಲಿ ಜನಮೆಚ್ಚುಗೆ ಸಾಕಷ್ಟು ಸಿಕ್ಕರೂ ಧನಮೆಚ್ಚುಗೆ ಸಿಕ್ಕಿದ್ದು ಅಷ್ಟಕ್ಕಷ್ಟೆ. ಎರಡನೇ ಸಿನಿಮಾ ಕೂಡ ಸದಭಿರುಚಿಯ ಸಿನಿಮಾ ಆಗಿ ಹಲವರ ಮೆಚ್ಚುಗೆ ಪಡೆದುಕೊಂಡಿದ್ದರೂ ಚಿತ್ರಮಂದಿರದಲ್ಲಿ ಹೆಚ್ಚು ದಿನ ನಿಲ್ಲಲು ಸಾಧ್ಯವಾಗಲಿಲ್ಲ. ಇದರಿಂದ ಸತ್ಯ ಪ್ರಕಾಶ್ ಅವರಿಗೆ, 'ನಾವು ಸಿನಿಮಾ ಮಾಡಿದರಷ್ಟೇ ಸಾಲದು, ಅದನ್ನು ಹೆಚ್ಚು ಜನರಿಗೆ ತಲುಪಿಸುವ ದಾರಿಯನ್ನೂ ಕಂಡುಕೊಳ್ಳಬೇಕು' ಎಂಬುದು ಹೊಳೆದಿದೆ. ಇದೇ ಆಲೋಚನೆಯಲ್ಲಿದ್ದಾಗಲೇ ಅವರಿಗೆ ಮಂಗಳೂರಿನ ಪ್ರಕಾಶ್ ಪಾಂಡೇಶ್ವರ್ ಅವರ ಭೇಟಿಯೂ ಆಗಿದೆ. ಚಿತ್ರ ವಿತರಣೆಯ ಬಗ್ಗೆ ಚರ್ಚೆ ನಡೆಸುತ್ತ ಹೊಸದೊಂದು ಕನಸು ರೂಪುಗೊಂಡಿದೆ. ಆ ಕನಸಿಗೀಗ 'ಸತ್ಯ ಡಿಸ್ಟ್ರಿಬ್ಯೂಷನ್' ಎಂದು ಹೆಸರಿಡಲಾಗಿದೆ.

ಸಿನಿಮಾ ವಿತರಣೆಯ ಹೊಸ ಸಾಹಸದಲ್ಲಿ ಸತ್ಯ ಅವರ ಜೊತೆಗೆ ದೀಪಕ್ ಗಂಗಾಧರ್, ಮಂಜುನಾಥ್ ಡಿ. ಅವರೂ ಜೊತೆಯಾಗಿದ್ದಾರೆ.

ಸಿನಿಮಾ ಸಿದ್ಧ ಮಾಡಿಕೊಂಡು ಮುಂದೇನು ಮಾಡುವುದು? ಯಾವ ಚಿತ್ರಮಂದಿರಗಳಲ್ಲಿ ಬಿಡುಗಡೆ ಮಾಡುವುದು? ಹೇಗೆ ಜನರಿಗೆ ತಲುಪಿಸುವುದು ಎಂಬ ಗೊಂದಲದಲ್ಲಿರುವ ಹೊಸಬರ ತಂಡಕ್ಕೆ 'ಸತ್ಯ ಡಿಸ್ಟ್ರಿಬ್ಯೂಷನ್ಸ್' ಹೆಗಲಾಗಿ ನಿಲ್ಲಲಿದೆ ಎಂದು ಈ ತಂಡ ಹೇಳಿಕೊಂಡಿದೆ.



ಇತ್ತೀಚೆಗೆ ಬೆಂಗಳೂರಿನಲ್ಲಿ ಡಾಲಿ ಧನಂಜಯ್ ಸತ್ಯ ಡಿಸ್ಟ್ರಿಬ್ಯೂಷನ್ಸ್‌ಗೆ ಚಾಲನೆ ನೀಡಿದರು. ಮುಂದೆ ಜಿಲ್ಲೆಗೊಂದರಂತೆ ನೂರರಿಂದ ನೂರೈವತ್ತು ಆಸನ ವ್ಯವಸ್ಥೆಯ ಕಿರು ಚಿತ್ರಮಂದಿರಗಳನ್ನು ಪ್ರಾರಂಭಿಸುವ ಆಲೋಚನೆಯೂ ಈ ತಂಡಕ್ಕಿದೆ. ■